ಕಾಡಿಗೆ ಕಣ್ಣು

ಕಲೀಮ್ ಉಲ್ಲಾ



# ಮಹಾನಂದ ಎಂಬ ಹಸಿರು ಕಡಲು

ಇದನ್ನು ಭಾರತದ ದೊಡ್ಡ ಗಮಟೆಹಕ್ಕಿ ಎಂದೂ ಕರೆಯುತ್ತಾರೆ. ಕನ್ನಡದಲ್ಲಿ ಮಂಗಟ್ಟೆ ಎಂಬ ಇನ್ನೊಂದು ಹೆಸರೂ ಇದೆ. ಬಾಗಿದ ದೊಡ್ಡ ಹಳದಿ ಕೊಕ್ಕಿಗೆ ಮೇಲೆ ಕೊಂಬಿನಂತಹ ವಿಶೇಷ ಟೊಪ್ಪಿಗೆ ಇದೆ. ಕಪ್ಪು ಮತ್ತು ಬಿಳಿಯ ದೇಹದ ಅತ್ಯಂತ ಸುಂದರ ಹಕ್ಕಿಯಿದು. ಹಾರಿದಾಗ ಹೆಲಿಕಾಪ್ಟರ್ ಆಗಸದಲ್ಲಿ ಚಲಿಸಿದಂತಹ ದನಿ ಕೇಳಿ ಬರುತ್ತದೆ.

ನಾವು ಬೆಳಗ್ಗೆ ಡಾರ್ಜಲಿಂಗ್ ಬಿಟ್ಟವರು ಮಧ್ಯಾಹ್ನದ ಹೊತ್ತಿಗೆ ಇಲ್ಲಿಗೆ ಬಂದಿದ್ದೇವೆ. ಆ ತಿರುವಿನಲ್ಲಿದ್ದ ಕ್ಯಾಂಟೀನ್ ಮೇಲೆ ನಮ್ಮ ಡ್ರೈವರ್ ರಂತೂ ಸಾಹನಿಗೆ ಎಲ್ಲಿಲ್ಲದ ದುರಾಸೆ. ಇಲ್ಲಿ ಮೀನೂಟ ಚೆನ್ನಾಗಿ ಸಿಗುತ್ತೆ ಎಂದು ಹೇಳಿ ಕಾರು ನಿಲ್ಲಿಸಿ ಓಡಿ ಹೋದ. ಹೋಟೆಲ್ಲಿನವರು ಅವನಿಗೆ ತುಂಬಾ ಪರಿಚಿತರು. ತಿನ್ನುವುದರಲ್ಲಿ ಅವನಿಗೇನು ನಮ್ಮಂತೆ ಆಸೆ ಆಸಕ್ತಿಗಳಿರಲಿಲ್ಲ. 'ಪಕ್ಕಾ ಬಂಗಾಲಿಗಳು ಊಟ ತಿಂಡಿ ಚೆನ್ನಾಗಿ ಕತ್ತರಿಸುತ್ತಾರೆ ಸರ್. ನಾನು ಮಾತ್ರ ಹಂಗಲ್ಲ ಚೀಪ್ ಮೆನ್ಟೇನ್ ಇಂಜಿನ್' ಎಂದು ನಗುತ್ತಿದ್ದ. ಆ ಕ್ಯಾಂಟೀನ್ ಒಡತಿ ಮನೆ ಮಗನಂತೆ ಇವನನ್ನು ಕಾಣುತ್ತಿದ್ದಳು. ಮಹಾನಂದ ಅಭಯಾರಣ್ಯಕ್ಕೆ ಹೋಗುವ ಇಲ್ಲವೇ ವಾಪಸ್ಸು ಬರುವ ಪ್ರತಿ ಪಕ್ಷಿಪ್ರಿಯರು ಇಲ್ಲೊಮ್ಮೆ ನಿಂತು ತಿಂದು ಕುಡಿದು ಮುಂದೆ ಹೋಗುವುದು ವಾಡಿಕೆಯಾಗಿತ್ತು.

ಫೋಟೊಗ್ರಫಿಗೆ ಬರುವವರಿಗೆ ಊಟಕ್ಕೆಂದು ಈತ ಕರೆತರುವುದು ಇಲ್ಲಿಗೇನೆ. 'ಡಿಸ್ಕವರಿ ಚಾನೆಲ್‌ನೋರು ಬಂದಾಗ ವಾರವಿಡೀ ತಿಂಡಿ ಊಟ ಇಲ್ಲೇ ಹಾಕಿಸಿದ್ದೆ ಸರ್' ಎಂದ ರಂತೂ ಸಾಹ. ಅಂಥವರೇ ಬಂದು ಹೋಗಿರಬೇಕಾದರೆ ನಿಮ್ಮದೇನು ಲೆಕ್ಕ ಎಂಬ ಒಳ ಹೊಡೆತವೂ ಅವನ ಮಾತಲ್ಲಿ ಇದ್ದಿರಬೇಕು. ಮಹಾನಂದ ಎಂಬ ಅಭಯಾರಣ್ಯದ ಯಾನ ಮುಗಿಸಿ ಇಳಿವಾಗ ಸಿಲುಗುರಿ ಮತ್ತು ಡಾರ್ಜಲಿಂಗ್ ಜೋಡಿಸುವ ಮುಖ್ಯ ರಸ್ತೆ ಸಿಗುತ್ತದೆ. ಇಲ್ಲೊಂದು ಇಕ್ಕಟ್ಟಾದ ಸರ್ಕಲ್. ಪೋಲೀಸರು, ಅರಣ್ಯ ಇಲಾಖೆಯವರು ಹೋಗಿ ಬರುವ ಜನರನ್ನು ಹಿಡಿದು ತಪಾಸಣೆ ಮಾಡುವ ಜಾಗ ಕೂಡ ಹೌದು. ಇಲ್ಲೇ ಈ ಕ್ಯಾಂಟೀನ್ ಇರುವುದು.

ಇದನ್ನು ಹೋಟೆಲ್ಲು, ಅಂಗಡಿ, ವೈನ್ ಸ್ಟೋರ್, ಪೆಟ್ರೋಲ್ ಬಂಕ್, ದವಾಖಾನೆ, ಪಾನ್ ಶಾಪ್ ಹೀಗೆ ಯಾವ ಹೆಸರಿನಿಂದ ಕರೆದರೂ ತಪ್ಪಿರಲಿಲ್ಲ. ಯಾಕೆಂದರೆ ಇಲ್ಲಿ ಎಲ್ಲವೂ ಲಭ್ಯವಿತ್ತು. ಇಂತಹ ಅಪೂರ್ವ ಜಾಗೆ ಒಲ್ಲೆ ಎಂದರೆ ದೂರದ ಸಿಲುಗುರಿ ಸಿಟಿಗೆ ಹೋಗಬೇಕಿತ್ತು. ಹೀಗೆಲ್ಲಾ ಯೋಚಿಸುವುದು ಮೂರ್ಖತನ. ಜೊತೆಗೆ ಸಮಯ ವ್ಯರ್ಥ. ಪಟ ಶಿಕಾರಿಗೆ ಬಂದಾಗ ಊಟ ತಿಂಡಿ ಎಂಬುದು ಮುಖ್ಯವಲ್ಲ. ಆದರೂ ನಮ್ಮ ಕಳ್ಳ ನಾಲಿಗೆ ಈ ಮಾತನ್ನು ಒಪ್ಪುವುದಿಲ್ಲ. ಕ್ಯಾಮೆರಾಗೆ ಸಂತೈಸಿದಂತೆ ಇದನ್ನು ಮಮತೆಯಿಂದ ಕಾಣುವುದು ನಮ್ಮ ಧರ್ಮ. 'ಒಂದಿಷ್ಟು ಉಪ್ಪು ಹುಳಿ ಖಾರ ಇರೋ ಊಟ ಹಾಕ್ರೋ ಬಡ್ಡೀ ಮಕ್ಕಳಾ' ಎಂದು ಇದು ಆಗಾಗ ಬೈಯುತ್ತದೆ.

ಇಲ್ಲಿಂದ ಹೊರಟು ಮುಂದೆ ನಾವು ಅನೇಕ ಬೆಟ್ಟ ಗುಡ್ಡಗಳನ್ನು